ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೇಷ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

ಸ್ ೧೯೦೩ನೇ ಇಸವಿ ಜನವರಿ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊ ಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಆರ್ಜೀ ನಂಬರ್ 335.

ಮೃತಪಟ್ಟ ನಂಜಿನಗೂಡು ತಾ|| ರವಿನ್ಯೂ ಗುಮಾಸ್ತೆ ಅನಂತಪದ್ಮನಾಭರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಯಡತೊರೆ ತಾ|| ಟ್ಯಾಂಕು ಇನ್‌ಸ್ಪೆಕ್ಟರು ಮೈಸೂರು ಶ್ರೀನಿವಾಸರಾಯರ ಮನೇಲಿರುವ ಅನಂತಪದ್ಮನಾಭ ರಾಯರ ಹೆಂಡತಿ ಸಾವಿತ್ರಮ್ಮ ಮೈನರ್, ಗಾರ್ಡಿಯರ್ ಶ್ರೀನಿವಾಸರಾವ್, ಮೃತಪಟ್ಟ ಸದರೀ ಅನಂತಪದ್ಮನಾಭರಾಯರಿಗೆ ಹೆಂಡತಿ ಆಗ ಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದಲ್ಲಿ ಮೃತಪಟ್ಟ ಅನಂತಪದ್ಮನಾಭರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿವ್ ಮಾಡಿ ರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅನಂತಪದ್ಮನಾ ಭರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಜನವರಿ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋ ಣಾಗಿಧೆ.

ಎಸ್. ವರದರಾಜಯ್ಯಂಗಾರ್, ಸಬ್ ಜಡ್ಜ್.

ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ, ಲಿಮಿಟೆಡ್.

ಸ್ ೧೮೯೫ನೇ ಇಸವಿಯ ಮೂರನೇ ನಂಬರು ರೆಗ್ಯುಲೇರ್ಷ ಆದ ಮೈಸೂರ ಕಂಪನಿಸ್ ಆಕ್ಟು ಅನುಸರಿಸಿ ರಿಜಸ್ಟರ್ ಮಾಡಲ್ಪಟ್ಟಿಧೆ.

ಇದರ ಬಂಡವಾಳ 5,00,000 ರೂಪಾಯಿಗಳು. ಷೇರು 1ಕ್ಕೆ 25 ರೂಪಾಯಿಗಳಂತೆ 20,000 ಷೇರುಗಳು. ಅಪ್ಲಿ ಕೇರ್ಷನ್ನೊಡನೆ 5 ರೂಪಾಯಿಗಳು, ಷೇರುಗಳು ಹಂಚಿದಕೂಡ್ಲೆ 5 ರೂಪಾಯಿಗಳು, ಬಾಕಿ 15 ರೂಪಾಯಿಗಳು ಕಾಲ್ ಬಂದಕ್ಕೆ ರೂಪಾಯಿಗಳಂತೆ ಪಾವತಿ ಮಾಡತಕ್ಕದ್ದು.

ಕಂಪನಿಯ ಷೇರುಲಿಸ್ಟು ಸಿದ್ಧವಾಗಿರುವದು. ಹಣವು ಬೆಂಗಳೂರಿನಲ್ಲಿರುವ ಮದರಾಸ್ ಬ್ಯಾಂಕಿಗಾಗಲಿ ಅಥವಾ ಮ್ಯಾನೇಜಿಂಗ್ ಡೈರೆಕ್ಟರಿಗಾಗಲಿ ಕಳುಹಿಸಿ ರಸೀತಿ ಪಡೆಯಬಹುದು.

ಷೇರುಗಳು ಮೈಸೂರು ಸೀಮೆಯಲ್ಲಿ ವಾಸಮಾಡುವವರಿಗು ಮತ್ತು ಅನ್ಯದೇಶದಲ್ಲಿ ವಾಸಿಸುತ್ತಿರುವ ಈ ದೇಶಿಯರಿಗು ಕೊಡ ಲ್ಪಡುವದು. ಪ್ರಕಟನೆ ಪತ್ರಿಕೆಗಳು ಮತ್ತು ಇತರ ತಪಸೀಲುಗಳು ಸಹಾ ಇದರಡಿ ಸೈ ಮಾಡಿರುವವರಿಂದ ತರಿಸಿಕೊಳ್ಳಬಹುದು.

ಏ. ಸುಬ್ಬರಾವ್,
ಮ್ಯಾನೇಜಿಂಗ್ ಡೈರೆಕ್ಟರ್,
ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ ರೈಲ್ವೆಕಂಪನಿ, ಲಿಮಿಟೆಡ್,
68ನೇ ನಂಬರು, 2ನೇ ಬೀದಿ, ಚಾಮರಾಜಪ್ಯಾಟೆ, ಬೆಂಗಳೂರು.

ಶ್ರೀನಿವಾಸಪುರ—ಕೈವಾರ ವೆಂಕೋಬರಾಯರವರಿಗೆ ಶ್ರೀ|| ಜಮೀರ್‌ದಾರ ಸುಬ್ಬರಾಯಪ್ಪನವರಿಂದ ನೋಟಿಸ್—ನೀವು 400 ರೂ ಪಾಯಿಗೆ ವಪ್ಪಿದದ್ದಕ್ಕೆ ಕೋರ್ಟಿನಲ್ಲಿ ತಪ್ಪುಪ್ರಮಾಣಾ ಮಾಡಿ 600 ರೂಪಾಯಿಗೆ ಡಿಕರಿ ಪಡಿದಿರಿ. ರಾಗಿ ಕ್ರಯ 98 ರೂಪಾಯಿಗೆ ಜವಾಬ್ ಕೊಡಲಿಲ್ಲಾ. ಮಾಣಿಆರ್ಡರ್ ವಾಪಸು ಮಾಡಿದಿರಿ ಈಗಲು 62 ರೂಪಾಯಿ ಸಿದ್ಧವಾಗಿಧೆ ಘಸಲು ಬರಲಾರದು. 160 ರೂ ಪಾಯಿನ ಪತ್ರ ವಾಪಸು ಮಾಡದೆ ದಾವೆ ಮಾಡಿದರೆ ಆ ಕೂಡ್ಲೆ ನಿಮ್ಮವ್ಯಾಲೆ 1-4—6—1902ರಲ್ಲು ಬರದ ಪ್ರಕಾರ ಮಾನನಷ್ಟ ಬಾಬು 500 ರೂಪಾಯಿಗೆ ದಾವೆ ಮಾಡುತ್ತೇನೆ ತಿಳಿಯುವದು.

ಸುಬ್ಬರಾಯಪ್ಪ.